(ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 35 ರವರೆಗೆ, ಎರಡೂ ಸೇರಿದಂತೆ,

ಪ್ರಸ್ತಾವ ಏನೆಂದರೆ :–

ಅಧ್ಯಕ್ಷರು : ಖಂಡ 2 ರಿಂದ 35 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 35 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ, ನಗರ ಯೋಜನೆ, ನಗರಸಭೆ) ಮಾನ್ಯ ಅಧ್ಯಕ್ಷರೆ, 2003ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2003ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು. ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಈಗ ಸದನವನ್ನು 3.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1.41 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸೇರಲು ತೀರ್ಮಾನಿಸಿತು)

(ಸದನವು ಪುನಃ ಮಧ್ಯಾಹ್ನ 3–10 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(2) ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕ 2003

ಪರ್ಯಾಲೋಚನಾ ಪ್ರಸ್ತಾವ

+**ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)** : ಮಾನ್ಯ ಅಧ್ಯಕ್ಷರೆ, 2003ರ ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು 2003ನೇ ಸಾಲಿನ ಅಮೆಂಡ್‌ಮೆಂಟ್ ಬಿಲ್ ಆಗಿರುತ್ತದೆ. ಈಗಾಗಲೇ ಇದು ಅರ್ಡಿನೆನ್ಸ್ ಮುಖಾಂತರ ಜಾರಿಯಲ್ಲಿದೆ. ಇದು ವೇಕೆಂಟ್ ಲ್ಯಾಂಡ್‌ಗೆ ಟ್ಯಾಕ್ಸ್ ಅನ್ನು ಭೂಮಿಯ ಮೂಲಕ ಬೆಲೆಯ ಶೇಕಡಾ 0.1 ಕ್ಕಿಂತ ಕಡಿಮೆಯಲ್ಲದ ಮತ್ತು ಶೇಕಡಾ 0.2 ಕ್ಕಿಂತ ಹೆಚ್ಚಲ್ಲದಂಥ ಶೇಕಡವಾರಿನಂತೆ; ವಾಸದ ಕಟ್ಟಡ ಮತ್ತು ವಾಣಿಜ್ಯೇತರ ಕಟ್ಟಡಗಳ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ ಕಟ್ಟಡದ ಮೂಲ ಬೆಲೆಯ ಶೇಕಡಾ 0.3 ಕ್ಕಿಂತ ಕಡಿಮೆಯಲ್ಲದ ಮತ್ತು ಶೇಕಡಾ 0.6 ಕ್ಕಿಂತ ಹೆಚ್ಚಲ್ಲದಂಥ ಶೇಕಡಾವಾರಿನಂತೆ ಕಾಪಿಟಲ್ ವ್ಯಾಲ್ಯೂ ಮೇಲೆ ನಾವು ಈಗಾಗಲೇ ರೆಡ್ಯೂಸ್ ಮಾಡಿದ್ದೇವೆ. 2400 ಅಡಿ ಇರುವಂಥ ಸೈಟ್‌ಗೆ ಖಾಲಿ ಜಾಗಗಳಿಗೆ ಎಕ್ಸಮ್ಟ್ ಅನ್ನು ನಾವು ಮಾಡಿದ್ದೇವೆ. ವಾಟರ್ ಸೆಸ್ 20 ಪರ್ಸಂಟ್ ಅನ್ನು ನಾವು ಪ್ರಾಪರ್ಟಿ ಟ್ಯಾಕ್ಸ್‌ಗೆ ಅಬಾಲಿಶ್ ಮಾಡಿದ್ದೇವೆ. 30.9.2003ರೊಳಗಡೆ ಯಾರು ಈ 2 ಪರ್ಸಂಟ್ ಪೆನಾಲ್ಟಿಯನ್ನು ಕಟ್ಟಬೇಕಾಗಿತ್ತೋ, ಅದನ್ನು ಕಟ್ಟುವಂಥವರಿಗೆ 5 ಪರ್ಸಂಟ್ ಅನ್ನು ರಿಬೇಟ್ ಮಾಡಲಿಕ್ಕೆ ಒಂದು ಅವಕಾಶವನ್ನು ಕೂಡ ನಾವು ಕೊಟ್ಟಿದ್ದೇವೆ. ಆ ಮೇಲೆ ಡಿಸ್ಟ್ರಿಕ್ ಹೆಡ್‌ಕ್ವಾರ್ಟರ್ಸ್. ಈ ಟಿ.ಎಂ.ಸಿ. ಸಿ.ಎಂ.ಸಿ.ಗಳು. ಈಗ ಹೊಸದಾಗಿರುವಂಥ ಮಡಿಕೇರಿ, ಹಾವೇರಿ, ಕೊಪ್ಪಳ, ಇವು ಮೂರು ಕೂಡ ಜಿಲ್ಲಾ ಕೇಂದ್ರಗಳಾಗಿವೆ. 50 ಸಾವಿರ ಜನಸಂಖ್ಯೆಗಿಂತ ಕಡಿಮೆ ಇದ್ದರೂ ಕೂಡ ಇವು ಡಿಸ್ಟ್ರಿಕ್ ಹೆಡ್‌ಕ್ವಾರ್ಟರ್ಸ್ ಆಗಿರುವುದರಿಂದ ಇದನ್ನು ಸಿ.ಎಂ.ಸಿ. ಆಗಿ ಪರಿವರ್ತನೆ ಮಾಡಬೇಕೆಂದು ನಾವು ಒಂದು ಅಮೆಂಡ್‌ಮೆಂಟ್ ಅನ್ನು ತಂದಿದ್ದೇವೆ. ಈ ಡಿವಿಶನಲ್ ಕಮಿಷನರ್ ಪೋಸ್ಟ್ ಅಬಾಲಿಶ್ ಆಗಿರುವುದರಿಂದ ಈ ಪವರ್ಸ್ ಅನ್ನು ಅಪೀಲ್ ಮುಂತಾದವನ್ನು ಅಸಿಸ್ಟೆಂಟ್ ಕಮಿಷನರಿಗೆ ಹಾಗೂ ಆ ಸಂಬಂಧಪಟ್ಟಂಥ ಟೌನ್ ಪಂಚಾಯತಿಗಳಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಮತ್ತು ಡಿ.ವಿ.ಸಿ ಮಾಡುತ್ತಿದ್ದಂಥದ್ದನ್ನು ದಿ.ಡೈರೆಕ್ಟರ್ ಆಫ್ ಮುನ್ಸಿಫಲ್ ಅಡ್ಮಿನಿಸ್ಟ್ರೇಷನ್‌ರವರಿಗೆ ಕೊಟ್ಟಿದ್ದೇವೆ. ಮತ್ತೊಂದು ನಮ್ಮ ಅಂಕೋಲಾ ಶಾಸಕರಿಗೆ ಖುಷಿಯಾಗುವಂಥದ್ದು, ಅನುಕೂಲವಾಗುವಂಥದ್ದು ಅನ್ನು ಅವರ ರಿಕ್ವೆಸ್ಟ್ ಮೇಲೆ ಮಾಡಿದ್ದೇವೆ. ಕಾರ್ಪೊರೇಷನ್‌ನಲ್ಲಿ ಮಾತ್ರ ಈ ಚಾರಿಟಿಬಲ್ ಇನ್ಸ್‌ಟ್ಯೂಷನ್ಸ್‌ಗೆ ಟ್ಯಾಕ್ಸ ಇದೆ. ಪ್ಲೇನ್ ಆಫ್ ವರೆಶಿರ್ಫ, ಹಾಸ್ಪಿಟಲ್, ರೆಕಾಗ್ನೈಸ್ ಇನ್ಸ್‌ಟ್ಯೂಷನ್ಸ್, ನಮ್ಮ ಮುನ್ಸಿಪಾಲಿಟೀಸ್‌ನಲ್ಲಿ ಇರುವಂಥ ಸಂಸ್ಥೆಗಳಿಗೆ, ಹಾಸ್ಟೆಲ್‌ಗಳಿಗೆ, ಎಜುಕೇಷನ್ ಇನ್ಸ್‌ಟ್ಯೂಟ್‌ಗಳಿಗೆ, ಬರಿಯಲ್ ಗ್ರೌಂಡ್, ಗವರ್ನಮೆಂಟ್ ಕ್ವಾರ್ಟರ್ಸ್, ಇಂಥವರಿಗೆಲ್ಲಾ ಪ್ರಾಪರ್ಟಿ ಟ್ಯಾಕ್ಸ್ ಎಕ್ಸಮ್ಟ್ ಮಾಡಬೇಕೆನ್ನುವಂಥ ಒಂದು ರಿಕ್ವೆಸ್ಟ್‌ನ್ನು ಮಾಡಿಕೊಂಡಿದ್ದರು. ಹೀಗೆ ಅನೇಕ ಸಲಹೆ ಮೇರೆಗೆ ಅದಕ್ಕೂ ಕೂಡ ಎಕ್ಸಮ್ಟ್ ಅನ್ನು ನಾವು ತಂದಿದ್ದೇವೆ. ಇವನ್ ಅವಿಶ್ವಾಸ ನಿರ್ಣಯ ಮಂಡಿಸುವಂಥ ಸಂದರ್ಭದಲ್ಲಿ ಮೂರನೇ ಎರಡರಷ್ಟು ಸದಸ್ಯರು ಎಂದು ಇದೆ. ನಾಮಿನೇಟೆಡ್ 5 ಜನ ಸದಸ್ಯರು ಇದ್ದರು, ಅವರನ್ನು ಸೇರಿಸಿಕೊಂಡು ಮೂರನೇ ಎರಡರಷ್ಟು ಸದಸ್ಯರು ಎಂದಾಗುತ್ತದೆ ಎಂದು ಕೆಲವರು ಹೇಳಿದ ದೃಷ್ಟಿಯಿಂದ ಇದನ್ನು ಬರೀ ಎಲೆಕ್ಷನ್‌ನಲ್ಲಿ ಗೆದ್ದವರು ಮಾತ್ರ ಮೂರನೇ ಎರಡರಷ್ಟು ಎಂದು ಲೆಕ್ಕ ಹಾಕಬೇಕು ಮತ್ತು ಆ ಮೀಟಿಂಗ್‌ನಲ್ಲಿ ಇದ್ದಂಥವರಿಗೆ ಅಲ್ಲಿ ಮೂರನೇ ಎರಡರಷ್ಟನ್ನು ಮಾಡಿ ಅದರಲ್ಲಿ ಮಿನಿಮಮ್ ಹಾಫ್ ಆಫ್ ದಿ ಟೋಟಲ್ ಮೆಂಬರ್ಸ್ ಆಫ್ ದಿ ಕೌನ್ಸಿಲರ್ಸ್ ವೋಟಿಂಗ್ ರೈಟ್ಸ್ ಇದ್ದಂಥವರು ಪಾರ್ಟಿಸಿಪೇಟ್ ಮಾಡಬೇಕು ಎನ್ನುವಂಥ ವಿಚಾರಗಳನ್ನೆಲ್ಲಾ ಈ ಬಿಲ್‌ನಲ್ಲಿ ನಾವು ಇವತ್ತು ತಂದಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಅವಿಶ್ವಾಸದ ಬಗ್ಗೆ ಎಲೆಕ್ಟೆಡ್ ಮೆಂಬರ್ಸ್‌ಗೆ ಆ ಪ್ರಾವಿಜನ್ ಇದ್ದರೆ ಒಳ್ಳೆಯದಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ : ನೋಡಿ, ಇಲ್ಲಿ ಏನಾಗಿದೆ ಎಂದರೆ ಮೊದಲು ಮೂರನೇ ಎರಡರಷ್ಟು ಎಂದು ಮಾಡುವಂಥ ಸಂದರ್ಭದಲ್ಲಿ ಅವರನ್ನೂ ಸೇರಿಸಿಕೊಂಡ ಸೈನ್ ಹಾಕಬೇಕೆಂದು ಇತ್ತು. ಅದೇ ಬೇಡ ಎಂದು ಹೇಳಿ ಎಲೆಕ್ಷನ್‌ನಲ್ಲಿ ಗೆದ್ದಿದ್ದಾರೆ ಅವರು ಮಾತ್ರ ಆ ಮೂರನೇ ಎರಡರಷ್ಟು ಸದಸ್ಯರಲ್ಲಿ ಬರುತ್ತಾರೆ.

ಅಧ್ಯಕ್ಷರು : ಅಂದರೆ ನಾಮಿನೇಟೆಡ್ ಮೆಂಬರ್ಸ್‌ಗೆ ಪವರ್ಸ್ ಇಲ್ಲ ಎಂದು ಆಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಏನಿದೆ ಅದನ್ನು ನಾವು ಮೊದಲೇ ವ್ಯಕ್ತಪಡಿಸಿದ್ದೇವೆ. ನಮ್ಮ ವಿರೋಧವನ್ನು ಮೀರಿಯೂ ಸರ್ಕಾರ ಹಿಂದಿನ ಮಸೂದೆಯನ್ನು ಸ್ವೀಕಾರ ಮಾಡಿದೆ. ಇದೇ ನಿಲುವನ್ನು ಈ ಮಸೂದೆಗೆ ಕೂಡ ಮತ್ತೊಮ್ಮೆ ವ್ಯಕ್ತಪಡಿಸುತ್ತಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್ : ಎಗ್ಸಮ್‌ಷನ್ ತಂದಿರುವ ಬಗ್ಗೆ ಪರ ಇದ್ದೀರೋ ಅಥವಾ ವಿರೋಧ ಇದ್ದೀರೋ ಎನ್ನುವುದನ್ನು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ಆಗ ಪ್ರಸ್ತಾಪ ಮಾಡಿದಾಗಲೂ ಒಳ್ಳೆಯದನ್ನು ತಂದಿರುವುದಕ್ಕೆಲ್ಲಾ ಒಳ್ಳೆಯ ಎಂದು ಹೇಳಿದ್ದೇವೆ. ನೀವು ಅನೇಕ ಪ್ರಯತ್ನಗಳನ್ನು ಮಾಡಿ ಚರ್ಚೆಯನ್ನು ಮಾಡಿ ಒಳ್ಳೆಯದನ್ನು ಮಾಡುವುದಕ್ಕೆ ಮಾಡಿದಂಥ ಪ್ರಯತ್ನದ ಬಗ್ಗೆಯೂ ನಾವು ನಮ್ಮ ಸಂತೋಷವನ್ನು ವ್ಯಕ್ತಪಡಿಸಿದೇವೆ. ಜನತೆಗೆ ಇನ್ನೂ ತೊಂದರೆಯಾಗತಕ್ಕಂಥ, ಆಗುತ್ತಿರುವಂಥ ಅನೇಕ ಸಂಗತಿಗಳು ಇವೆ. ಅದೇ ನಮಗೆ ಮುಖ್ಯವಾದದ್ದು. ಇನ್ನೂ ಅನೇಕ ತಿದ್ದುಪಡಿಗಳನ್ನು ಮಾಡುವುದಿದೆ ಅದು ನಮ್ಮ ಅಭಿಪ್ರಾಯವಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ದೇವರು ಒಳ್ಳೆಯ ಬುದ್ಧಿಯನ್ನು ಕೊಟ್ಟಿದ್ದಾನೆ. ಏಕೆಂದರೆ ಕೋಆಪರೇಟೀವ್ ಡಿಪಾರ್ಟ್‌ಮೆಂಟ್‌ನಲ್ಲಿ ಇದ್ದಾಗ ಅಲ್ಲಿ ಮಿನೇಟೆಡ್ ಡೈರೆಕ್ಷರ್ಸ್‌ಗೆಲ್ಲಾ ವೋಟಿಂಗ್ ರೈಟ್ಸ್ ಕೊಟ್ಟು ಎಲ್ಲಾ ಸರಿ ಮಾಡಿ ಸುದ್ದಿ ಮಾಡಿ ಬಂದರು. ಇಲ್ಲಿ ಮಾಡಲಿಲ್ಲ. ಆಗ ಹೇಗೆ ಮಾಡಿದ್ದಿರೋ ಹಾಗೆ ಇಲ್ಲಿ ಮಾಡಿದ್ದೀರೋ ಏನೋ ಎಂದು ತಿಳಿದುಕೊಂಡಿದ್ದೆವು ಇಲ್ಲಿ ಬರೋಬರಿ ಮಾಡಿದ್ದೀರಿ. ಅದಕ್ಕೆ ನಾವು ಸಂತೋಷ ವ್ಯಕ್ತಪಡಿಸುತ್ತೇವೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಸಂಸ್ಕೃತವನ್ನೇ ತನ್ನ ಕಡೆಗೆ ಇಟ್ಟುಕೊಂಡು ರಾಜ್ಯದ ಜನರ ಬಗ್ಗೆ ಸಂಸ್ಕೃತದಲ್ಲಿ ಅವರ ಮನಸ್ಸನ್ನು ಸೆಳೆಯುವ ವಿಚಾರದಲ್ಲಿ ಮಾನ್ಯ ಶಿವಕುಮಾರ್‌ರವರು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಈಗ ತಂದಿರುವ ಈ ಬಿಲ್ ಅನ್ನು ನಾನು ಸ್ವಾಗತ ಮಾಡುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2003ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 34ರವರೆಗೆ ಎರಡೂ ಸೇರಿದಂತೆ,

ಪ್ರಸ್ತಾವ ಏನೆಂದರೆ :–

ಅಧ್ಯಕ್ಷರು : ಖಂಡ 2 ರಿಂದ 34 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 34 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಕೆ. ಶಿವಕುಮಾರ್ (ನಗಾರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2003ರ ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(2) ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2003, ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಎಂ. ನಾಣಯ್ಯ (ಅಬ್ಕಾರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಎಂ.ಎಂ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅಬ್ಕಾರಿ ಕಾಯಿದೆ ಅದರ ಡೆಫನೇಷನ್ ಕ್ಲಾಸ್‌ನಲ್ಲಿ, ಡೆಫನೆಷನ್ 2, 11,27, ರಲ್ಲಿ ಕೆಲವೊಂದು ಸಂದಿಗ್ಧ ಬರಿದ ಕಾರಣ ಅವುಗಳನ್ನು ಹೋಗಲಾಡಿಸಲು ಒಂದು ಹೆಂಡ ಮತ್ತು ಅಬಕಾರಿ ಮರ ಎಂಬ ಪರಿಭಾಷೆಯಲ್ಲಿ ಕಾಣುವಂಥ ಸಂದಿಗ್ಧವನ್ನು ನಿವಾರಿಸಲಿಕ್ಕಾಗಿ ಮಧ್ಯದ ಅಂಶವಿರುವ ಮತ್ತು ಎನ್ನುವ ಪದಬಿಡಬೇಕಾಗುತ್ತದೆ. ಮತ್ತು ಅದೇರೀತಿ 43(ಎ)ರಲ್ಲಿ ಇದುವರೆವಿಗೂ ಜಪ್ತಿ ಮಾಡಿದ ಸ್ವತ್ತುಗಳನ್ನು, ಅಬಕಾರಿ ಅಪರಾಧದಲ್ಲಿ ಜಪ್ತಿ ಮಾಡಿದ ಸ್ವತ್ತುಗಳನ್ನು ಖಾತರಿ ಬಾಂಡ್ ಮೇಲೆ ಬಿಡುತ್ತಿದ್ದರು ಅದಕ್ಕೆ ಬದಲಾಗಿ ಬ್ಯಾಂಕ್ ಗ್ಯಾರಂಟಿ ಕೊಡುವಂತೆ, ಮತ್ತೆ ಇನ್ನೊಂದು ಯಾವ ಅಬಕಾರಿ ಅಪರಾಧದಲ್ಲಿ ಯಾವ ಸಂದರ್ಭದಲ್ಲಿ ಲೈಸೆನ್ಸ್‌ನ್ನು ಅಮಾನತ್ತುಗೊಳಿಸಬೇಕಾಗಿತ್ತೋ ಅಥವಾ ಕ್ಯಾನ್ಸಲ್ ಮಾಡಬೇಕಾಗಿತ್ತೋ, ಅದರ ಪರವಾಗಿ ಅವರ ಕಾಂಪನ್ ಸೇಟ್ ಹಣವನ್ನು ಮತ್ತು ದಂಡವನ್ನು ವಿಧಿಸಿ ಅವರಿಗೆ ಅದನ್ನು ವಿನಾಯಿತಿ ಕೊಡುವಂಥ ಪ್ರಾವಿಜನ್ ತಂದಿದ್ದೇವೆ. ಆದ್ದರಿಂದ ಅದನ್ನು ಅಂಗೀಕರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.